**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ.43/2023**

ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಹೆಸರು | ಗೀತಮ್ಮ | ಸಿಡಬ್ಲ್ಯೂ-5 |
| ತಂದೆ/ ಗಂಡನ ಹೆಸರು | ಸಣ್ಣತಿಪ್ಪೇಸ್ವಾಮಿ | ಪಿ ಡಬ್ಲ್ಯೂ-5 |
| ವಯಸ್ಸು | 30 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ಬೆಳವಟ್ಟಿ | ದಿಃ02-08-2025. |

**ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ. ರವರಿಂದಃ**

ಚಾಸಾ-1 ನನ್ನ ಅಣ್ಣ. ಚಾಸಾ-2 ರಿಂದ 4, 6 ನನಗೆ ಗೊತ್ತು. ಚಾಸಾ-7 ಮತ್ತು 8 ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರು ನನ್ನ ಅಣ್ಣಂದಿರು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಯಾವುದೇ ಗಲಾಟೆಯನ್ನು ಕಣ್ಣಾರೆ ನೋಡಿಲ್ಲ ಮತ್ತು ಬಿಡಿಸಿಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿಗೆ ನಿಪಿಃ2 ರ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಸಿ)ಅಂತಾ ಗುರುತಿಸಲಾಯಿತು. ಸದರಿ ಸಹಿಯನ್ನು ಕೊರಡಿಹಳ್ಳಿಯಲ್ಲಿ ಮಾಡಿರುತ್ತೇನೆ. ಯಾವಾಗ ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಕ್ರಮ ಜರುಗಿಸಿಲ್ಲ. ನನ್ನ ಜೊತೆಗೆ ಬೇರೆ ಯಾರು ಇರಲಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

2. ದಿಃ24-10-2022 ರಂದು ನಮ್ಮ ಗ್ರಾಮವಾದ ಕೊರಡಿಹಳ್ಳಿಯಲ್ಲಿಯಲ್ಲಿ ನಮ್ಮ ತಂದೆಯ ಅಂತ್ಯ ಕ್ರಿಯೇ ಮಾಡಿದ್ದೇವು ಎಂದರೆ ಸರಿ. ಸದರಿ ಸಮಯದಲ್ಲಿ 1 ನೇ ಆರೋಪಿ ಜಮೀನು ವಿಚಾರದಲ್ಲಿ ಚಾಸಾ-1 ಮತ್ತು 4 ರವರೊಟ್ಟಿಗೆ ಗಲಾಟೆ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ಅಲ್ಲಿಯೇ ಇದ್ದ ಸಣ್ಣಬೋರಣ್ಣ ಮತ್ತು ಪಾಪಣ್ಣರವರು ಜಗಳ ಬಿಡಿಸಿ ಬುದ್ಧಿವಾದ ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. ದಿಃ28-10-2022 ರಂದು ಬೆಳಿಗ್ಗೆ 6-00 ಗಂಟೆ ಸಮಯದಲ್ಲಿ ನನ್ನ ತಂದೆಯ

ವೈಕುಂಠಸಮಾರಾಧನೆಯ ಪ್ರಯುಕ್ತ ಚಾಸಾ-1 ರವರು ಮನೆಯ ಹತ್ತಿರ ಇದ್ದಾಗ 1 ನೇ ಆರೋಪಿ ಅಲ್ಲಿಗೆ ಬಂದು ಚಾಸಾ-1 ರವರನ್ನು ಮುಂದಕ್ಕೆ ಹೋಗದಂತೆ ತಡೆಹಿಡಿದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ಚಾಸಾ-1 ರವರಿಗೆ 1 ನೇ ಆರೋಪಿ ಅವಾಚ್ಯವಾಗಿ ಬೈದಿರುತ್ತಾರೆ ಮತ್ತು ಚಾಸಾ-1 ರವರನ್ನು ಬಿಡುವುದಿಲ್ಲವೆಂದು ಬೆದರಿಕೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಮತ್ತು ಚಾಸಾ-6 ರವರು 1 ನೇ ಆರೋಪಿಯನ್ನು ಸಮಾಧನಪಡಿಸಿ ಕರೆದುಕೊಂಡು ಹೋಗಬೇಕಾದರೆ 1 ನೇ ಆರೋಪಿ ತನಗೆ 2 ನೇ ಆರೋಪಿಯಾದ ನಾಗೇಶನ ಬಲವಿದ್ದು ಅವನು ಜಮೀನು ವಿಚಾರವಾಗಿ ಗಲಾಟೆ ಮಾಡಲು ಹೇಳಿಕೊಟ್ಟಿರುತ್ತಾನೆ ಎಂದು ನುಡಿದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಗಲಾಟೆ 2 ನೇ ಆರೋಪಿಯ ಕುಮ್ಮಕ್ಕಿನಿಂದ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

4. ದಿಃ04-11-2022 ರಂದು ಕೊರಡಿಹಳ್ಳಿಗೆ ಬಂದು ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 10-30 ರವರೆಗೆ ಮಹಜರ ಕ್ರಮ ಜರುಗಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ನನ್ನ ಜೊತೆಗೆ ಚಾಸಾ-2 ಮತ್ತು 3 ರವರು ಹಾಜರಿದ್ದು, ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ04-11-2022 ರಂದು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿಪಿಃ3 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋತರಿಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಓ ಪಿ., ಆರೋಪಿತರ ಪರ ವಕೀಲರಿಂದಃ**

ಆರೋಪಿಯ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದ ಕಾರಣ ಸದರಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ